# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ.04/2024**

**ದೋ.ಸಾ. : 05 ಪ್ರಾ.ಸಾ. : 08**

| | | |
|---|---|---|
| ಸಾಕ್ಷಿಯ ಹೆಸರು | : | ರಾಘವೇಂದ್ರ ಜಟ್ಟಾನಾಯ್ಕ |
| ತಂದೆಯ ಹೆಸರು | : | ಜಟ್ಟಾನಾಯ್ಕ |
| ವಯಸ್ಸು | : | 42 ವರ್ಷ |
| ಕೆಲಸ | : | ಇಲೆಕ್ಟ್ರಿಷಿಯನ್ |
| ವಾಸ | : | ತೆರ್ನಮಕ್ಕಿ, ಮುರ್ಡೇಶ್ವರ, ಭಟ್ಕಳ |

**ದಿನಾಂಕಃ 16-12-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ-**

1. ದಿ. 18-10-2023 ರಂದು ಮಧ್ಯಾಹ್ನ ಸುಮಾರು 12.00 ಗಂಟೆಗೆ ಚಾಸಾ-1 ರವರ ಮನೆಯ ಬಳಿಯಲ್ಲಿ ರಸ್ತೆ ದೀಪ ಸರಿ ಮಾಡುತ್ತಿದ್ದ ಸಮಯದಲ್ಲಿ ಮುರ್ಡೇಶ್ವರ ಪೊಲೀಸರು ಚಾಸಾ-1 ರವರ ಮನೆಯ ಬಳಿ ಪಂಚನಾಮೆಗೆ ಬರುವಂತೆ ನೋಟಿಸ್ ನೀಡಿದ್ದರು. ನಿಪಿ-25 ನೋಟಿಸಿನಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-25(ಬಿ) ಎಂದು ಗುರುತಿಸಲಾಯಿತು. ಆನಂತರ ಪೊಲೀಸರು ಚಾಸಾ-1 ರವರ ಮನೆಯ ಬಳಿ, ಪಂಚನಾಮೆ ಮಾಡಿ, ಸಹಿ ಪಡೆದುಕೊಂಡರು ಹಾಗೂ ಫೋಟೊ ತೆಗೆದಿರುತ್ತಾರೆ. ಪಂಚನಾಮೆಯನ್ನು ಈಗಾಗಲೇ ನಿಪಿ-8 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-8(ಸಿ) ಎಂದು ಗುರುತಿಸಲಾಯಿತು. ಫೋಟೊವನ್ನು ಈಗಾಗಲೇ ನಿಪಿ-9 ಎಂದು ಗುರುತಿಸಲಾಗಿದೆ. ಯಾವ ಕಾರಣಕ್ಕಾಗಿ ಪಂಚನಾಮೆ ಮಾಡಿದರು ಎಂದು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಮಾನ್ಯ ಅಭಿಯೋಜಕರು ಅನುಮತಿಯನ್ನು ಕೇಳುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಗಮನಿಸಿ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ  ಸರಕಾರಿ ಅಭಿಯೋಜಕರಿಂದಃ–**

2. ಪೊಲೀಸರು ಪಂಚನಾಮೆಗಾಗಿ ಬಂದಾಗ ಚಾಸಾ–1 ರವರು ಸ್ಥಳದಲ್ಲಿ ಹಾಜರಿದ್ದು, ತಾನು ಬಾಡಿಗೆಗೆ ನೀಡಿದ್ದ ಮನೆಗಳನ್ನು ತೋರಿಸಿದ್ದರು ಎಂದರೆ ಸರಿ. ಅವುಗಳ ಪೈಕಿ ಒಂದು ಮನೆಯನ್ನು ಆರೋಪಿಗೆ ಬಾಡಿಗೆಗೆ ನೀಡಿದ್ದೆ ಎಂದು ತೋರಿಸಿದ್ದರು ಎಂದರೆ ಸರಿ. ಸದರಿ ಮನೆಯು ಕಾಯ್ಕಿಣಿ ಗ್ರಾಮ ಪಂಚಾಯತಿಯ ಮನೆಯ ನಂ. 95/2 ಆಗಿತ್ತು ನನಗೆ ನೆನಪಿಲ್ಲ.

**ಪಾಟೀ ಸವಾಲುಃ  ಆರೋಪಿ ಪರ ಶ್ರೀ ಆರ್.ಕೆ.ಎಂ. ವಕೀಲರಿಂದಃ–**

3. ನಿಪಿ–8 ಪಂಚನಾಮೆಯಲ್ಲಿ ಏನೇನು ಬರೆದಿದ್ದರು ಎಂದು ನನಗೆ ಗೊತ್ತಿಲ್ಲ. ಪೊಲೀಸರು ನಿಲ್ಲು ಎಂದು ಹೇಳಿದ ಮೇರೆಗೆ ನಾನು ನಿಂತಿದ್ದು, ಆಗ ಫೋಟೊ ತೆಗೆದಿರುತ್ತಾರೆ. ಸದರಿ ಪಂಚನಾಮೆ ಮಾಡಿದ ಸ್ಥಳದಲ್ಲಿ ಏನು ಆಗಿತ್ತು ಎಂದು ನನಗೆ ಗೊತ್ತಿಲ್ಲ. ನಾನು ಸಹಿ ಮಾಡಿದ ದಾಖಲೆಯು, ಅದು ಬರೆದ ಹಾಳೆಯಾಗಿತ್ತೋ ಅಥವಾ ಖಾಲಿ ಹಾಳೆಯಾಗಿತ್ತೋ ಎಂದು ನನಗೆ ನೆನಪಿಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.
Sd/–
(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ